ಓಂ ಶಾಂತಿ, ಬಾಪ್ ದಾದಾ, ಅವ್ಯಕ್ತ ಮುರಳಿ 20-09-1971.

*ಆತ್ಮಿಕ ಸ್ನೇಹಿಯಾಗಿ* (रूहानी स्नेही बनो)

ವ್ಯಕ್ತದಿಂದ ಅವ್ಯಕ್ತರಾಗುವುದರಲ್ಲಿ ಎಷ್ಟು ಸಮಯ ಹಿಡಿಸುತ್ತದೆ? ತಾವು ಅನ್ಯರನ್ನು ಅಜ್ಞಾನಿಯಿಂದ ಜ್ಞಾನಿಯನ್ನಾಗಿ ಎಷ್ಟು ಸಮಯದಲ್ಲಿ ಮಾಡಬಲ್ಲಿರಿ? ಈಗಿನ ಸ್ಥಿತಿಯಪ್ರಮಾಣ ಎಷ್ಟು ಸಮಯದಲ್ಲಿ ತಯಾರು ಮಾಡಬಲ್ಲಿರಿ? ತಮ್ಮನ್ನು ತಾವು ಏನೆಂದು ತಿಳಿದುಕೊಳ್ಳುತ್ತೀರಿ, ಎಷ್ಟು ಸಮಯದಲ್ಲಿ ಮಾಡಬಲ್ಲಿರಿ? ಆಗುವಂತಹವರ ಮಾತು ಬೇರೆಯಾಗಿದೆ ಆದರೆ ಯಾರು ಚೆನ್ನಾಗಿ ತಯಾರಾಗುವವರಿದ್ದಾರೆಯೋ ಅವರನ್ನು ತಾವು ತಮ್ಮ ಶಕ್ತಿಯನುಸಾರ ಎಷ್ಟು ಸಮಯದಲ್ಲಿ ತಯಾರು ಮಾಡಬಲ್ಲಿರಿ? ಈಗ ತಮ್ಮ ತೀವ್ರತೆಯ ಬಗ್ಗೆ ಅರ್ಥವಾಗುತ್ತದೆಯಲ್ಲವೆ? ಸಮಯಪ್ರಮಾಣ ಈಗ ಅಜ್ಞಾನಿಯನ್ನು ಜ್ಞಾನಿಯನ್ನಾಗಿ ಮಾಡುವುದರಲ್ಲಿ ಸ್ವಲ್ಪ ಸಮಯ ಹಿಡಿಸುತ್ತದೆ ಏಕೆಂದರೆ ತಯಾರು ಮಾಡುವವರು ತನ್ನನ್ನು ಅವ್ಯಕ್ತರೂಪದಲ್ಲಿ ತಂದುಕೊಳ್ಳಲು ಇಲ್ಲಿಯವರೆಗೂ ಬಹಳ ಸಮಯ ತೆಗೆದುಕೊಳ್ಳುತ್ತಿದ್ದೀರಿ. ತಾವು ತಯಾರು ಮಾಡುವವರು ಸ್ವಯಂ ಹೇಗೆಗೆ ಒಂದು ಸೆಕೆಂಡಿನಲ್ಲಿ ವ್ಯಕ್ತದಿಂದ ಅವ್ಯಕ್ತರೂಪದಲ್ಲಿ ಸ್ಥಿತರಾಗುವ ಅಭ್ಯಾಸಿಯಾಗುತ್ತಾ ಹೋಗುತ್ತೀರೋ , ತಯಾರಾಗುವವರನ್ನೂ ಸಹ ಅಷ್ಟು ಬೇಗನೆ ಮಾಡಬಲ್ಲಿರಿ. ಯಾರಾದರೂ ದೇವತಾಧರ್ಮದ ಆತ್ಮನಲ್ಲದೇ ಇರಬಹುದು ಆದರೂ ಒಂದುಸೆಕೆಂಡಿನಲ್ಲಿ ಕೆಲವರಿಗೆ ಮುಕ್ತಿ, ಕೆಲವರಿಗೆ ಜೀವನ್ಮುಕ್ತಿಯ ವರದಾನವನ್ನು ಕೊಡಲು ನಿಮಿತ್ತರಾಗುತ್ತೀರಿ. ಸರ್ವಾತ್ಮರಿಗೆ ಮುಕ್ತಿಯ ವರದಾನ ತಾವು ಬ್ರಾಹ್ಮಣರ ಮೂಲಕವೇ ಪ್ರಾಪ್ತಿಯಾಗಬೇಕಾಗಿದೆ. ಹೇಗೆ ಯಂತ್ರದಲ್ಲಿ ಒಂದುವಸ್ತುವನ್ನು ಹಾಕಿದಾಗ ಯಾವಕಡೆ ಹೋಗುವ ವಸ್ತುವಾಗಿರುವುದೋ ಅದು ಅದೇರೂಪದಲ್ಲಿ ಮತ್ತು ಅದೇಕಡೆ ತಾನಾಗಿಯೇ ಒಂದುಸೆಕೆಂಡಿನಲ್ಲಿ ಬೇರ್ಪಡುತ್ತಾ ಹೋಗುತ್ತದೆ ಮತ್ತು ಹೊರ ಬರತೊಡಗುತ್ತದೆ ಏಕೆಂದರೆ ಯಂತ್ರದ ವೇಗವು ತೀವ್ರವಾಗಿರುವ ಕಾರಣ ಯಾವ ವಸ್ತು ಎಲ್ಲಿಯದೋ ಅಲ್ಲಿಗೆ ಹೋಗತೊಡಗುತ್ತದೆ. ಯಾವುದು ಯಾವ ರೂಪ ತೆಗೆದುಕೊಳ್ಳಬೇಕೋ ಆ ರೂಪ ತೆಗೆದುಕೊಳ್ಳುತ್ತಾ ಹೋಗುತ್ತದೆ ಅಂದಮೇಲೆ ಈ ಆತ್ಮಿಕ ಯಂತ್ರವೂ ಸಹ ಕಡಿಮೆಯೇನಿಲ್ಲ. ಈ ಯಂತ್ರದ ಮೂಲಕ ತಾವು ಒಂದು ಸೆಕೆಂಡಿನಲ್ಲಿ ಮುಕ್ತಿಯವರಿಗೆ ಮುಕ್ತಿ, ಜೀವನ್ಮುಕ್ತಿಯವರಿಗೆ ಜೀವನ್ಮುಕ್ತಿಯ ವರದಾನವನ್ನು ಕೊಡಲು ಸಾಧ್ಯವಿಲ್ಲವೆ? ತಾವಂತೂ ಮಹಾದಾನಿಗಳಾಗಿದ್ದೀರಿ ಮತ್ತು ಮಹಾಜ್ಞಾನಿ, ಮಹಾಯೋಗಿಗಳೂ ಆಗಿದ್ದೀರಿ ಹಾಗೂ ಒಂದುಸೆಕೆಂಡಿನಲ್ಲಿ ತಮ್ಮ ಜನ್ಮಸಿದ್ಧ ಅಧಿಕಾರವನ್ನು ಪ್ರಾಪ್ತಿ ಮಾಡಿಕೊಳ್ಳಬಲ್ಲಿರಿ ಎಂಬುದನ್ನೂ ಮರೆಯುತ್ತೀರಿ ಅಂದಮೇಲೆ ಕೇವಲ ಹಾಗೆಯೇ ಬರೆಯುತ್ತೀರಾ ಅಥವಾ ಹೇಳುತ್ತೀರಾ? ಯಥಾರ್ಥ ಮಾತಾಗಿದೆ ಆದ್ದರಿಂದಲೇ ಹೇಳುತ್ತೀರಲ್ಲವೆ. ಅಂದಾಗ ಒಂದುಸೆಕೆಂಡಿನಲ್ಲಿ ಆತ್ಮಕ್ಕೆ ಮುಕ್ತಿ-ಜೀವನ್ಮುಕ್ತಿಯ ಮಾರ್ಗವನ್ನು ತೋರಿಸಬಲ್ಲಿರಿ ಹಾಗೂ ವರದಾನ ಕೊಡಬಲ್ಲಿರಿ ತಾನೇ? ವರದಾನವನ್ನು ಪ್ರಾಪ್ತಿ ಮಾಡಿಸುವುದು, ತಮ್ಮನ್ನು ವರದಾನದ ಮೂಲಕ ಸಂಪನ್ನ ಮಾಡಿಕೊಳ್ಳುವುದು ಬೇರೆ ಮಾತಾಗಿದೆ ಆದರೆ ತಾವಂತೂ ವರದಾನವನ್ನು ನೀಡುವವರಾಗಿದ್ದೀರಲ್ಲವೆ. ಒಂದುಸೆಕೆಂಡಿನ ವರದಾನಿಮೂರ್ತಿ ಆಗಿದ್ದೀರಾ ತಮ್ಮನ್ನು ಒಂದು ಸೆಕೆಂಡಿನಲ್ಲಿ ವ್ಯಕ್ತದಿಂದ ಅವ್ಯಕ್ತರನ್ನಾಗಿ ಮಾಡಿ ಕೊಳ್ಳಬಲ್ಲಿರಾ? ಹಾಗಿದ್ದರೆ ಎಷ್ಟು ಸಮಯಕ್ಕಾಗಿ? ಅಲ್ಪಕಾಲಕ್ಕಾಗಿ ಮಾಡಿಕೊಳ್ಳಬಲ್ಲಿರಾ? ಇದೇ ಕಾರಣದಿಂದ ನಿಮ್ಮಿಂದ ತಯಾರಾಗುವವರಿಗೂ ಸಹ ಅಲ್ಪಕಾಲದ ನಶೆ, ಅಲ್ಪಕಾಲದ ಖುಷಿಯಿರುತ್ತದೆ, ಅವರೂ ಸಹ ಅಲ್ಪಕಾಲಕ್ಕಾಗಿ ಪರಿವರ್ತನೆಯಾಗುತ್ತಾರೆ. ತಯಾರು ಮಾಡುವಂತಹ ಮಾಸ್ಟರ್ ರಚಯಿತರು ಹೇಗಿದ್ದೀರೋ ಹಾಗೆಯೇ ತಮ್ಮ ರಚನೆಯೂ ತಯಾರಾಗುತ್ತಿದೆ. ಹೇಗೆ ತಾವು ತಂದೆಯೊಂದಿಗೆ ಅಲ್ಪಸಮಯಕ್ಕಾಗಿ ವಾರ್ತಾಲಾಪ ಮಾಡುತ್ತೀರಿ, ಮಿಲನ ಹಾಗೂ ಮಗ್ನದ, ಗುಣಗಳ ಸ್ವರೂಪದ ಅನುಭವ ಮಾಡುತ್ತೀರಿ ಹಾಗೆಯೇ ರಚನೆಯೂ ಸಹ ಅಲ್ಪಕಾಲಕ್ಕಾಗಿ ತಮ್ಮ ಮಹಿಮೆ ಮಾಡುತ್ತಾರೆ. ಅಲ್ಪಸಮಯಕ್ಕಾಗಿ ಸೇರುವ, ಮಿಲನ ಮಾಡುವ ಸಂಬಂಧವನ್ನಿಟ್ಟುಕೊಳ್ಳುತ್ತಾರೆ. ಅಲ್ಪಸಮಯಕ್ಕಾಗಿ ಸ್ವಯಂ ಅನುಭವ ಮಾಡುತ್ತಾರೆ, ಗುಣಗಾನ ಮಾಡುತ್ತಾರೆ ಹಾಗೂ ಕೆಲಕೆಲವೊಮ್ಮೆ ಈ ಪ್ರಾಪ್ತಿಯಾಗಿರುವ ಅನುಭವವನ್ನು ವರ್ಣನೆ

ಮಾಡುತ್ತಾರೆ ಅಂದಮೇಲೆ ಇದಕ್ಕೆ ಕಾರಣ ಯಾರು? ಮೀಟಿಂಗ್‌ನಲ್ಲಿ ಅನೇಕ ಕಾರಣಗಳನ್ನು ಕಳೆಯುವ ಪ್ರೋಗ್ರಾಮ್ ಮಾಡಿದಿರಾ? ಒಂದುವೇಳೆ ಈ ಕಾರಣದ ನಿವಾರಣೆ ಮಾಡಿಕೊಂಡಿದ್ದೇ ಆದರೆ ಮತ್ತೆಲ್ಲಾ ಕಾರಣಗಳು ಏನೂ ಇಲ್ಲವೇನೋ ಎಂಬಂತೆ ಸಮಾಪ್ತಿಯಾಗಿಬಿಡುತ್ತವೆ. ಅಂದಮೇಲೆ ಮೂಲಕಾರಣ ಇದೇ ಆಗಿದೆ. ಸದಾ ತಂದೆಯ ಸ್ನೇಹ ಮತ್ತು ಸಹಯೋಗದಲ್ಲಿದ್ದಾಗ ಸರ್ವಾತ್ಮರು ತಮ್ಮ ಸ್ನೇಹದಲ್ಲಿ ಸ್ವತಹ ಸಹಯೋಗಿಯಾಗುವರು. ಮೊದಲೇ ತಿಳಿಸಿದ್ದೆವು. ಈಗಿನ ಆತ್ಮರಿಗೆ ಸರ್ವಅಲ್ಪಕಾಲದ ಸುಖ-ಶಾಂತಿಯ ಸಾಧನಗಳಿವೆ ಆದರೆ ಸತ್ಯವಾದ ಸ್ನೇಹವಿಲ್ಲ. ಸ್ನೇಹಕ್ಕೆ ಬಾಯಾರಿದ್ದಾರೆ. ಅನ್ನ ಹಾಗೂ ಧನ ಶರೀರದ ತೃಪ್ತಿಗೆ ಸಾಧನವಾಗಿದೆ ಆದರೆ ಆತ್ಮದ ತೃಪ್ತಿಯು ಆತ್ಮಿಕ ಸ್ನೇಹದಿಂದಲೇ ಬರುತ್ತದೆ. ಅದೂ ಅವಿನಾಶಿಯಾಗಿರಬೇಕು ಅಂದಮೇಲೆ ಸ್ನೇಹಿಗಳೇ ಸ್ನೇಹದ ದಾನ ಕೊಡಬಲ್ಲಿರಿ. ಒಂದುವೇಳೆ ಸ್ವಯಂ ಸದಾ ಸ್ನೇಹಿಯಲ್ಲದಿದ್ದರೆ ಅನ್ಯ ಆತ್ಮರಿಗೂ ಸದಾಕಾಲದ ಸ್ನೇಹ ಕೊಡಲು ಸಾಧ್ಯವಿಲ್ಲ ಆದ್ದರಿಂದ ಸದಾಸ್ನೇಹಿ ಆಗುವುದರಿಂದ ಸ್ನೇಹಿಯು ಸ್ನೇಹದಲ್ಲಿ ಬಂದು ಸ್ನೇಹಿಯಪ್ರತಿ ಎಲ್ಲವನ್ನೂ ಅರ್ಪಣೆ ಮಾಡಿಬಿಡುತ್ತಾರೆ. ಸ್ನೇಹಿಗೆ ಯಾವುದನ್ನೂ ಸಮರ್ಪಣೆ ಮಾಡುವುದಕ್ಕಾಗಿ ಯೋಚಿಸುವುದಾಗಲಿ ಅಥವಾ ಶ್ರಮವಾಗಲಿ ಆಗುವುದಿಲ್ಲ. ಅಂದಮೇಲೆ ಇಷ್ಟೊಂದು ಯಾವ ಬಹಳ ಮಾತುಗಳನ್ನು ಕೇಳುತ್ತೀರಿ ಅನೇಕ ಮರ್ಯಾದೆಗಳು ಹಾಗೂ ನಿಯಮಗಳನ್ನು ಕೇಳುತ್ತಾ ಕೇಳುತ್ತಾ ಇಷ್ಟೆಲ್ಲಾ ಮಾಡಬೇಕೇ ಎಂದು ಯೋಚಿಸುತ್ತೀರಿ. ಆದರೆ ಇದೆಲ್ಲವನ್ನು ಮಾಡುವುದಕ್ಕಾಗಿ ಎಲ್ಲದಕ್ಕಿಂತ ಸಹಜಯುಕ್ತಿ ಹಾಗೂ ಸರ್ವಬಲಹೀನತೆಗಳಿಂದ ಮುಕ್ತರಾಗುವ ಯುಕ್ತಿ ಇದೇ ಆಗಿದೆ- 'ಸದಾ ಸ್ನೇಹಿಯಾಗಿ', ಯಾರ ಸ್ನೇಹಿಯಾಗಿರುತ್ತೀರೋ ಆ ಸ್ನೇಹಿಯ ನಿರಂತರ ಸಂಗದಿಂದ ಆತ್ಮೀಯತೆಯ ರಂಗು ಸಹಜವಾಗಿ ಅಂಟುತ್ತದೆ.

ಒಂದುವೇಳೆ ಒಂದೊಂದು ಮರ್ಯಾದೆಗಳನ್ನು ಜೀವನದಲ್ಲಿ ತರುವ ಪ್ರಯತ್ನಪಡುತ್ತೀರೆಂದರೆ ಕೆಲವೊಮ್ಮೆ ಕಷ್ಟ, ಕೆಲವೊಮ್ಮೆ ಸಹಜವೆನಿಸುವುದು ಮತ್ತು ಇದೇ ಅಭ್ಯಾಸದಲ್ಲಿ ಅಥವಾ ಇದೇ ಕೊರತೆಯನ್ನು ತುಂಬುವುದರಲ್ಲಿಯೇ ಸಮಯ ಕಳೆದುಹೋಗುವುದು ಆದ್ದರಿಂದ ಈಗ ಒಂದು ಸೆಕೆಂಡಿನಲ್ಲಿ ಮರ್ಯಾದಾ ಪುರುಷೋತ್ತಮರಾಗಿ, ಹೇಗಾಗುತ್ತೀರಿ? ಕೇವಲ ಸದಾ ಸ್ನೇಹಿಯಾದಾಗ, ತಂದೆಗೆ ಸದಾಸ್ನೇಹಿಗಳಾಗುವುದರಿಂದ ತಂದೆಯ ಮೂಲಕ ಸದಾ ಸಹಯೋಗ ಪ್ರಾಪ್ತಿಯಾಗುವುದರಿಂದ ಕಷ್ಟದ ಮಾತು ಸಹಜವಾಗುತ್ತದೆ. ಯಾರು ಸದಾ ಸ್ನೇಹಿಯಾಗುವರೋ ಅವರ ಸ್ಮೃತಿಯಲ್ಲಿಯೂ ಸದಾ ಸ್ನೇಹವೇ ಇರುತ್ತದೆ. ಅವರ ಚಹರೆಯಿಂದ ಸದಾ ಸ್ನೇಹಿಯ ಮೂರ್ತಿ ಪ್ರತ್ಯಕ್ಷದಲ್ಲಿ ಕಂಡುಬರುತ್ತದೆ. ಹೇಗೆ ಲೌಕಿಕರೀತಿಯಲ್ಲಿಯೂ ಯಾವುದೇ ಆತ್ಮವು ಅನ್ಯಆತ್ಮನ ಸ್ನೇಹದಲ್ಲಿದ್ದರೆ ಕೂಡಲೇ ನೋಡುವವರು ಅನುಭವ ಮಾಡುತ್ತಾರೆ- ಈ ಆತ್ಮವು ಯಾರದೋ ಸ್ನೇಹದಲ್ಲಿ ಮುಳುಗಿದ್ದಾರೆ ಎಂದು. ಅಂದಮೇಲೆ ಆತ್ಮಿಕ ಸ್ನೇಹದಲ್ಲಿ ಮುಳುಗಿರುವವರ ಚಹರೆಯು ಸ್ನೇಹಿಮೂರ್ತಿಯನ್ನು ಪ್ರತ್ಯಕ್ಷಮಾಡಲು ಆಗುವುದಿಲ್ಲವೆ? ಅವರ ಹೃದಯದ ಸೆಳೆತ ಸದಾ ಆ ಸ್ನೇಹಿಯೊಂದಿಗೆ ತೊಡಗಿರುತ್ತದೆ. ಅಂದಮೇಲೆ ಒಂದೇ ಕಡೆ ಸೆಳೆತವಿದ್ದಾಗ ಅನೇಕಕಡೆಯ ಸೆಳೆತವು ಸಹಜವಾಗಿ ಸಮಾಪ್ತಿಯಾಗುತ್ತದೆ. ಅನ್ಯರದನ್ನು ಬಿಡಿ, ಆದರೆ ತನ್ನೊಂದಿಗಿನ ಸೆಳೆತ ಅರ್ಥಾತ್ ದೇಹಾಭಿಮಾನ, ತನ್ನ ಸ್ಮೃತಿಯಿಂದಲೂ ದೂರ ಸದಾ ಸ್ನೇಹಿಯು ಮುಳುಗಿರುತ್ತಾರೆ ಅಂದಮೇಲೆ ಸಹಜಯುಕ್ತಿ ಅಥವಾ ವಿಧಿಯಿರುವುದರಿಂದ ಆ ಸಹಜಯುಕ್ತಿ ಹಾಗೂ ವಿಧಿಯಿಂದ ತಮ್ಮ ಸ್ಥಿತಿಯ ತೀವ್ರತೆಯಲ್ಲಿ ವೃದ್ಧಿಯನ್ನೇಕೆ ಮಾಡಿಕೊಳ್ಳುವುದಿಲ್ಲ? ಸದಾಸ್ನೇಹಿ ಒಬ್ಬ ಸರ್ವಶಕ್ತಿವಂತನ ಸ್ನೇಹಿಯಾಗಿರುವ ಕಾರಣ ಸರ್ವಾತ್ಮರಿಗೆ ಸ್ವತಹ ಸ್ನೇಹಿಯಾಗುತ್ತಾರೆ. ಈ ರಹಸ್ಯವನ್ನು ಅರಿತುಕೊಳ್ಳುವುದರಿಂದ ರಹಸ್ಯಯುಕ್ತ, ಯೋಗಯುಕ್ತ ಹಾಗೂ ದಿವ್ಯಗುಣಗಳಿಂದ ಯುಕ್ತಿಯುಕ್ತರಾಗುವ ಕಾರಣ ರಹಸ್ಯಯುಕ್ತ ಆತ್ಮನು ಸರ್ವಾತ್ಮರನ್ನು ತನ್ನೊಂದಿಗೆ ಸಹಜವಾಗಿ ರಾಜಿ ಮಾಡಿಕೊಳ್ಳುತ್ತಾರೆ. ಎಲ್ಲಿಯವರೆಗೆ ರಹಸ್ಯಯುಕ್ತರಾಗುವುದಿಲ್ಲವೋ ಅಲ್ಲಿಯವರೆಗೆ ಯಾರನ್ನೂ ರಾಜಿ ಮಾಡಿಕೊಳ್ಳಲು ಆಗುವುದಿಲ್ಲ. ಒಂದುವೇಳೆ ಅವರ ಚಹರೆ ಹಾಗೂ ಚಲನೆಯ ಮೂಲಕ ಅವರ ಮನಸ್ಸಿನ ರಹಸ್ಯವನ್ನು ಅರ್ಥಮಾಡಿಕೊಂಡರೆ ಸಹಜವಾಗಿ ಅವರನ್ನು ರಾಜಿ ಮಾಡಿಕೊಳ್ಳಬಲ್ಲಿರಿ ಆದರೆ ಕೆಲವೊಂದುಕಡೆ ಚಹರೆಯನ್ನು ನೋಡುತ್ತಾ, ಅವರ ಶಬ್ದಗಳನ್ನು ಕೇಳುತ್ತಾ, ಅವರ ಮನಸ್ಸಿನ ರಹಸ್ಯಗಳನ್ನು ಅರಿತುಕೊಳ್ಳದ ಕಾರಣ ಅನ್ಯರನ್ನೂ ಯಾವಾಗ ಬೇಕಾದರೂ ನಾರಾಜ್ (ಬೇಸರ) ಆಗುವರು ಹಾಗೂ ಸ್ವಯಂ ನಾರಾಜ್ ಆಗುವರು. ಆದ್ದರಿಂದ ಸದಾ ಸ್ನೇಹಿಯ ರಹಸ್ಯವನ್ನರಿತು ರಹಸ್ಯಯುಕ್ತರಾಗಿ,

ಒಳ್ಳೆಯದು- ಭವಿಷ್ಯದಲ್ಲಿ ವಿಶ್ವದ ಮಾಲೀಕರಾಗಬೇಕಾಗಿದೆ, ಇದಂತೂ ತಿಳಿದಿದೆಯಲ್ಲವೆ. ಆದರೆ ಈಗ ಏನಾಗಿದ್ದೇವೆ? ಈಗ ವಿಶ್ವದ ಮಾಲೀಕರೋ ಅಥವಾ ಸೇವಾಧಾರಿಗಳೊ? ಒಳ್ಳೆಯದು-

ಅವ್ಯಕ್ತ ಮುರಳಿ 20-09-1971.

***ಆತ್ಮಿಕ ಸ್ನೇಹಿಯಾಗಿ***

ಆತ್ಮಿಕ ಸ್ಥಿತಿಯಲ್ಲಿದ್ದು ಮನನ ಚಿಂತನೆ ಮಾಡಬೇಕಾಗಿರುವ ಸಂಕಲ್ಪಗಳು.

**ಆತ್ಮಿಕ ಸ್ಥಿತಿ/ಯೋಗ ಸ್ಥಿತಿ.**

ನಾನು ಆತ್ಮ ಪ್ರೇಮ ಸ್ವರೂಪ, ಶಿವ ಪರಮಾತ್ಮ ನನ್ನ ತಂದೆ.

1. ನಾನು ಒಂದು ಕ್ಷಣದಲ್ಲಿ ಸ್ವಯಂ ಅನ್ನು ವ್ಯಕ್ತದಿಂದ ಅವ್ಯಕ್ತವಾಗಿಸಿಕೊಂಡು ಅಜ್ಞಾನಿಗಳನ್ನೂ ಕೂಡ ಜ್ಞಾನಿಗಳನ್ನಾಗಿ ತಯಾರು ಮಾಡಿರುವ ಶಕ್ತಿ ಸ್ವರೂಪ.

2. ನಾನು ಕ್ಷಣದಲ್ಲಿ ಮುಕ್ತಿಯನ್ನು ಬಯಸುವವರಿಗೆ ಮುಕ್ತಿಯನ್ನು, ಜೀವನ್ ಮುಕ್ತಿ ಬೇಡುವವರಿಗೆ ಜೀವನ್ ಮುಕ್ತಿಯನ್ನು ಕೊಡಲು ನಿಮಿತ್ತವಾಗಿದ್ದೇನೆ.

3. ನಾನು ಸದಾ ತಂದೆಯ ಸ್ನೇಹ ಮತ್ತು ಸಹಯೋಗದಲ್ಲಿ ಇರುತ್ತಾ ಕಾರಣವನ್ನು ನಿವಾರಣೆ ಮಾಡಿಕೊಂಡಿರುವ ಕಾರಣ ಸರ್ವಾತ್ಮರು ನನಗೆ ಸ್ನೇಹೀ ಮತ್ತು ಸಹಯೋಗಿಯಾಗಿದ್ದಾರೆ.

4. ನಾನು ಸರ್ವಬಲಹೀನತೆಗಳಿಂದ ಮುಕ್ತಿಹೊಂದಿ ತಂದೆಗೆ ಸದಾ ಸ್ನೇಹಿಯಾಗಿರುತ್ತಾ ನಿರಂತರ ಸಾಂಗತ್ಯದಿಂದ ಆತ್ಮೀಯತೆಯ ಬಣ್ಣವನ್ನು ಸಹಜವಾಗಿ ಹಚ್ಚಿಕೊಂಡಿದ್ದೇನೆ.

5. ನಾನು ಸದಾಸ್ನೇಹಿಯಾಗಿ ಇರುವುದರಿಂದ ಒಂದು ಕ್ಷಣದಲ್ಲಿ ತಯಾರಾಗಿರುವ ಮರ್ಯಾದಾ ಪುರುಷೋತ್ತಮನು.

6. ನಾನು ಸತ್ಯವಾದ ಸ್ನೇಹದಿಂದ ಸರ್ವಾತ್ಮರಿಗೆ ಸುಖ, ಶಾಂತಿಯನ್ನು ಕೊಟ್ಟು ಅವರನ್ನು ತೃಪ್ತ ಆತ್ಮರನ್ನಾಗಿ ಮಾಡಿರುವ ಸ್ನೇಹ ಸ್ವರೂಪ.

7. ನಾನು ಸಹಜ ಯುಕ್ತಿ (ಸದಾ ತಂದೆಗೆ ಸ್ನೇಹಿಯಾಗಿರುವುದು) ಅಥವಾ ವಿಧಿಯಿಂದ ನನ್ನ ಸ್ಥಿತಿಯ ತೀವ್ರತೆಯನ್ನು ವೃದ್ಧಿ ಮಾಡಿಕೊಂಡಿದ್ದೇನೆ.

8. ನಾನು ಸರ್ವಶಕ್ತಿವಂತನೊಂದಿಗೆ ಸ್ನೇಹಿಯಾಗಿ, ಸರ್ವಾತ್ಮರಿಗೆ ಸ್ನೇಹಿ ಆಗಿ, ರಹಸ್ಯಯುಕ್ತವಾಗಿ, ಯೋಗಯುಕ್ತವಾಗಿ ದಿವ್ಯ ಗುಣಯುಕ್ತವಾಗಿದ್ದೇನೆ.